# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 256 | Pages. 2 | Date: 24-09-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 256 - ಪುಟಗಳು : 2 | 24-09-2026 ಗುರುವಾರ | Ph: 8762954248 | ದರ : ₹1


# ಹಿಂದು ಮಹಾಗಣಪತಿ ವಿಸರ್ಜನೆ ಸಂಪನ್ನ

## ಮಸೀದಿ ಎದುರು ಪೊಲೀಸರೊಂದಿಗೆ ವಾಗ್ವಾದ | ಕೆಲ ಹೊತ್ತಿನಲ್ಲೇ ಪರಿಸ್ಥಿತಿ ನಿಯಂತ್ರಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಆರ್‌ಎಸ್‌ಎಸ್, ಹಿಂದುಪರ ಸಂಘಟನೆಗಳು ಒಟ್ಟಾಗಿ ಪ್ರತಿಷ್ಠಾಪಿಸಿದ್ದ ಹಿಂದು ಮಹಾಗಣಪತಿ ವಿಸರ್ಜನಾ ಮಹೋತ್ಸವ ವೇಳೆ ಯುವಕರು ಹಾಗೂ ಪೊಲೀಸರ ನಡುವೆ ವಾಗ್ವಾದ ಉಂಟಾಗಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಘಟನೆಯಲ್ಲಿ ಯುವಕನೊಬ್ಬ ಗಾಯಗೊಂಡಿದ್ದಾನೆ. ಹೊಸ ಲೈನ್ ರಸ್ತೆಯ ಮಸೀದಿ ಮುಂಭಾಗ ಕಾರ್ಯಕರ್ತರು ಕರ್ಪೂರ ಹಚ್ಚಲು ಮುಂದಾಗುತ್ತಿದ್ದಂತೆ ಪೊಲೀಸರು ತಡೆಯಲು ಬಂದರು. ಆಗ ಯುವಕರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ಏರ್ಪಟ್ಟಿತು. ಕ್ಷಣಾರ್ಧದಲ್ಲಿ ಶುರುವಾದ ನೂಕಾಟದಿಂದ ಯುವಕನೊಬ್ಬ ಕೆಳಗೆ ಬಿದ್ದ. ಆತನ ಮೇಲೆ ಮತ್ತೆ ನಾಲ್ಕೈದು ಜನರು ಬಿದ್ದಿದ್ದರಿಂದ ಆತನ ಮೂಗಿನಿಂದ ರಕ್ತ ಸ್ರಾವವಾಗತೊಡಗಿತು. ತಕ್ಷಣವೇ ಯುವಕನನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಪೊಲೀಸರೇ ಮೆರವಣಿಗೆಗೆ ಅಡ್ಡಿಪಡಿಸುತ್ತಿದ್ದಾರೆಂದು ಯುವಕರು ವಾಗ್ವಾದ ಶುರು ಮಾಡಿದರು. ಶಾಂತಿಯುತ ಸಂಭ್ರಮಾಚರಣೆಗೆ ಅವಕಾಶ ಮಾಡಿಕೊಡುತ್ತಿಲ್ಲ. ಮಹಿಳೆಯರೊಂದಿಗೂ ಅಸಭ್ಯವಾಗಿ ವರ್ತಿಸುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು. ಸ್ವಲ್ಪ ದೂರದಲ್ಲೇ ಇದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು ಸ್ಥಳಕ್ಕಾಗಮಿಸಿ ಪರಿಸ್ಥಿತಿ ತಿಳಿಗೊಳಿಸಿದರು.

### ನಗರದಲ್ಲಿ ಅದ್ದೂರಿ ಮೆರವಣಿಗೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಿಂದು ಪರ ಸಂಘಟನೆಗಳಿಂದ ಪ್ರತಿಷ್ಠಾಪಿಸಿದ್ದ ಹಿಂದು ಮಹಾಗಣಪತಿ ವಿಸರ್ಜನೆ ಮಹೋತ್ಸವ ಸಾವಿರಾರು ಜನರ ಹರ್ಷೋದ್ಗಾರದೊಂದಿಗೆ ಬುಧವಾರ ನೆರವೇರಿತು. ಮಾಜಿ ಶಾಸಕ ಪ್ರೀತಂ ಗೌಡ ಅವರು ಮೆರವಣಿಗೆ ಆರಂಭವಾದಾಗಿನಿಂದ ಕೊನೆಯ ವರೆಗೂ ಜೊತೆಗೆ ಇದ್ದು ನಿಗಾ ವಹಿಸಿದರು.

ಸೆ. 14 ರಿಂದ ಸೆ. 23ರ ವರೆಗೆ ಪ್ರತಿದಿನ ಪೂಜಾ ಕೈಂಕರ್ಯ, ಅನ್ನ ಪ್ರಸಾದ ವಿನಿಯೋಗ ನೆರವೇರಿತು. ಗಣಪತಿ ಹಾಗೂ ಗೌರಿಗೆ ವಿಶೇಷ ಅಲಂಕಾರ ಮಾಡಿದ ಬಳಿಕ ಮಧ್ಯಾಹ್ನ 2 ಗಂಟೆಗೆ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಹಿಂದು ಮಹಾಗಣಪತಿ ಮೂರ್ತಿ ವಿಸರ್ಜನಾ ಮಹೋತ್ಸವ ಅಂಗವಾಗಿ ನಾಲ್ಕು ಡಿ.ಜೆ. ಅಳವಡಿಸಲಾಗಿತ್ತು. ಬಸವೇಶ್ವರ ದೇವಸ್ಥಾನ ಸಮೀಪದ ಕನ್ವೆನ್ಷನ್ ಹಾಲ್, ಡಬಲ್ ಟ್ಯಾಂಕರ್ ರಸ್ತೆ ಹಾಗು ಮೆರವಣಿಗೆಯಲ್ಲಿ ಎರಡು ಸೇರಿ ನಾಲ್ಕು ಡಿ.ಜೆ.ಗೆ ಅವಕಾಶ ಮಾಡಿಕೊಡಲಾಗಿತ್ತು. ಒಂದು ಡಿ.ಜೆ.ಬಳಿ ಯುವಕರು ಮತ್ತೊಂದರ ಬಳಿ ಯುವತಿಯರು ಹೆಜ್ಜೆ ಹಾಕುತ್ತಾ ಸಾಗಿದರು. ಮಹಿಳೆಯರ ಭದ್ರತೆ ಹಿತದೃಷ್ಟಿಯಿಂದ ಸುತ್ತಲೂ ಹಗ್ಗ ಕಟ್ಟಿ ಸರದಿ ಸಾಲು ಸಾಗುತ್ತಿತ್ತು. ಮಾಜಿ ಶಾಸಕ ಪ್ರೀತಮ್ ಜೆ. ಗೌಡ ಅವರು ಯುವಕರೊಂದಿಗೆ ನೃತ್ಯ ಮಾಡುತ್ತಾ ಹುರಿದುಂಬಿಸಿದರು.

ಸಹ್ಯಾದ್ರಿ ವೃತ್ತ, ಬಸವೇಶ್ವರ ಕಲ್ಯಾಣ ಮಂಟಪ ರಸ್ತೆ, ಹೊಸಲೈನ್ ರಸ್ತೆ, ಹಾಸನಾಂಬ ದೇವಾಲಯ, ಸುಭಾಷ್ ವೃತ್ತ, ಹೇಮಾವತಿ ಪ್ರತಿಮೆ ಮಾರ್ಗವಾಗಿ ದೇವಿಗೆರೆ ತಲುಪಿದ ಗಣೇಶ ಮೂರ್ತಿಯನ್ನು ರಾತ್ರಿ 9ರ ಸುಮಾರಿಗೆ ದೇವಿಗೆರೆಯಲ್ಲಿ ವಿಸರ್ಜಿಸಲಾಯಿತು.

### 600ಕ್ಕೂ ಅಧಿಕ ಪೊಲೀಸ್ ಭದ್ರತೆ

ಯಾವುದೇ ಅಹಿತಕರ ಘಟನೆ ನಡೆಯದಂತೆ ನಗರದಾದ್ಯಂತ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಸೇರಿ ಚಾಮರಾಜನಗರ, ಮಂಡ್ಯ ಜಿಲ್ಲೆ ಸೇರಿ 600 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಮಸೀದಿ ಮುಂಭಾಗ ಹೆಚ್ಚಿನ ಭದ್ರತೆಗಾಗಿ ಮೂರು ಪೊಲೀಸ್ ವಾಹನಗಳನ್ನು ನಿಲ್ಲಿಸಲಾಗಿತ್ತು. ಮೆರವಣಿಗೆ ಸಂದರ್ಭದಲ್ಲಿ ರಸ್ತೆಯುದ್ದಕ್ಕೂ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಲಾಗಿತ್ತು. ಹೆಜ್ಜೆ ಹೆಜ್ಜೆಗೂ ನಿಂತಿದ್ದ ಪೊಲೀಸರು ಶಾಂತಿಯುತ ಮೆರವಣಿಗೆಗೆ ಅನುವು ಮಾಡಿಕೊಟ್ಟರು.



# ಆಲೂರು ತೀವ್ರ ಬರ ಪಟ್ಟಿಗೆ ಸೇರಿಸಿ: ಆಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಆಲೂರು ತಾಲೂಕನ್ನು ಸಾಧಾರಣ ಬರ ಪಟ್ಟಿಗೆ ಸೇರಿಸುವುದನ್ನು ವಿರೋಧಿಸಿರುವ ಮಾಜಿ ಸಚಿವ ಹಾಗೂ ಮಾಜಿ ಶಾಸಕ ಹೆಚ್.ಕೆ.ಕುಮಾರಸ್ವಾಮಿ, ಕೂಡಲೇ ತೀವ್ರ ಬರ ಪಟ್ಟಿಗೆ ಸೇರಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಸಾಧಾರಣ ಪಟ್ಟಿಗೆ ಸೇರಿಸಿರುವುದು ದುರಂತ, ಇದು ನಾಮ್ ಕೆ ವಾಸ್ತೆ ಪ್ರಕ್ರಿಯೆ, ಬೇಲೂರು ತಾಲೂಕನ್ನು ತೀವ್ರ ಪಟ್ಟಿಗೆ ಸೇರಿಸಿರುವಂತೆ ಕೂಡಲೇ ಮಾರ್ಪಾಟು ಮಾಡಿ ಆಲೂರು ತಾಲೂಕನ್ನೂ ತೀವ್ರ ಬರಪಟ್ಟಿಗೆ ಸೇರಿಸಬೇಕೆಂದು ಒತ್ತಾಯಿಸಿದರು.

ಜಿಲ್ಲೆಯಲ್ಲಿ ಕುಡಿಯುವ ನೀರು ಹಾಗೂ ವಿದ್ಯುತ್ ಸಮಸ್ಯೆ ಹೆಚ್ಚಾಗುತ್ತಿದೆ. ಡಿಸಿ ಅವರ ಖಾತೆಯಲ್ಲಿ ಹಣ ಇದೆ ಎಂದಾದರೆ ಹಣ ಏಕೆ ಬಿಡುಗಡೆ ಮಾಡುತ್ತಿಲ್ಲ, ಕಾಮಗಾರಿ ಏಕೆ ನಡೆಸುತ್ತಿಲ್ಲ ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರದಲ್ಲಿ ತಾಳ ಮೇಳ ಇಲ್ಲದಂತಾಗಿದೆ. ಹಿರಿಯರಾದ ಹೆಚ್.ಕೆ.ಪಾಟೀಲ್ ಅವರು ರಾಜೀನಾಮೆ ಬೆದರಿಕೆ ಹಾಕಿದ ನಂತರ ಅವರು ಪ್ರತಿನಿಧಿಸುವ ತಾಲೂಕುಗಳನ್ನು ಬರಪಟ್ಟಿಗೆ ಸೇರಿಸಲಾಗಿದೆ.

ಆಲೂರಿನ ವಾಟೆಹೊಳೆ ಜಲಾಶಯ ತುಂಬಿದ್ದರೂ ಇನ್ನೂ ನಾಲೆಗಳಿಗೆ ನೀರು ಬಿಟ್ಟಿಲ್ಲ. ಇದಕ್ಕೆ ಕಾರಣ ನೀಡಬೇಕು. ನೀರಾವರಿ ಸಲಹಾ ಸಮಿತಿ ಉದಾಸೀನ ತೋರದೆ, ನಾಲೆಗೆ ನೀರು ಹರಿಸಬೇಕು, ಇಲ್ಲವಾದರೆ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಹೇಮಾವತಿ ಜಲಾಶಯದಿಂದ ನೀರು ಹರಿಸಿದ್ದರೂ, ಕಟ್ಟಾಯ ಹೋಬಳಿವರೆಗೆ ನೀರು ಹರಿದಿಲ್ಲ ಎಂದು ದೂರಿದರು. ಆದರೆ ನೇರವಾಗಿ ಕೆಆರ್‌ಎಸ್ ಜಲಾಶಯಕ್ಕೆ ನೇರವಾಗಿ ನೀರು ಹರಿಯುತ್ತಿದೆ, ರಾಜ್ಯ ಸರ್ಕಾರ ನಮ್ಮ ನಾಡಿನ ರೈತರ ಹಿತ ಬಲಿಕೊಟ್ಟು ತಮಿಳುನಾಡಿನ ಹಿತ ಕಾಯಲಾಗುತ್ತಿದೆ ಎಂದು ಆರೋಪಿಸಿದರು.

ತಾಲೂಕು ಜೆಡಿಎಸ್ ಅಧ್ಯಕ್ಷ ಎಸ್.ದ್ಯಾವೇಗೌಡ, ಜಿಲ್ಲಾ ವಕ್ತಾರ ಹೊಂಗೆರೆ ರಘು, ಮುಖಂಡರಾದ ಲಕ್ಷ್ಮಣಗೌಡ, ರಾಮಘಟ್ಟ ಜಗದೀಶ್, ಅಂಕಪುರ ರಾಜಕುಮಾರ್, ಪಾಪಣ್ಣ ಇದ್ದರು.

# ಬೇಲೂರಿನಲ್ಲಿ ಸೆ.30 ರಿಂದ ಧರ್ಮಜಾಗೃತಿ ಸಮಾವೇಶ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ 1008 ಜಗದ್ಗುರು ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ ಅಡ್ಡಪಲ್ಲಕ್ಕಿ ಮಹೋತ್ಸವ, ಇಷ್ಟಲಿಂಗ ಮಹಾಪೂಜೆ, ಧರ್ಮಜಾಗೃತಿ ಸಮಾವೇಶ, ಶಿವದೀಕ್ಷಾ, ವೀರಭದ್ರೇಶ್ವರ ಜಯಂತೋತ್ಸವ ಹಾಗೂ ವಧು-ವರರ ನೋಂದಣಿ ಕಾರ್ಯಕ್ರಮವನ್ನು ಸೆ.30 ಮತ್ತು ಅ.1 ರಂದು ಬೇಲೂರಿನಲ್ಲಿ ಆಯೋಜಿಸಲಾಗಿದೆ ಎಂದು ಸ್ವಾಗತ ಸಮಿತಿಯ ಗ್ರಾನೈಟ್ ರಾಜಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿ, ಅದೇ ದಿನ ವೀರಶೈವ ಲಿಂಗಾಯತ ಜಂಗಮ ಪುರೋಹಿತ ಅರ್ಚಕರ ಕ್ಷೇಮಾಭಿವೃದ್ಧಿ ಟ್ರಸ್ಟ್ ಉದ್ಘಾಟನೆಗೊಳ್ಳಲಿದೆ ಎಂದರು.

ಕಾರ್ಯಕ್ರಮದ ಅಂಗವಾಗಿ ಸೆ. 30 ರಂದು ಮಧ್ಯಾಹ್ನ 1 ಗಂಟೆಗೆ ಶ್ರೀಮದ್ ಉಜ್ಜಯಿನಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ, ಸಂಜೆ 6 ಗಂಟೆಗೆ ಧರ್ಮಜಾಗೃತಿ ಸಮಾವೇಶ ನಡೆಯಲಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ, ಸಣ್ಣ ಕೈಗಾರಿಕೆ ಸಚಿವ ವಿಜಯಾನಂದ ಕಾಶಪ್ಪನವರ್, ಸಂಸದ ಶ್ರೇಯಸ್ ಪಟೇಲ್, ಸ್ಥಳೀಯ ಶಾಸಕ ಹೆಚ್.ಕೆ.ಸುರೇಶ್, ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ವೀಣಾ ಕಾಶಪ್ಪನವರ್, ಎಲ್ಲ ರಾಜಕೀಯ ಪಕ್ಷಗಳ ಮುಖಂಡರು, ಜಿಲ್ಲಾಡಳಿತದ ಅಧಿಕಾರಿಗಳು ಭಾಗಿಯಾಗಲಿದ್ದಾರೆ ಎಂದರು.

ಅ.1 ರಂದು ಉಜ್ಜಯಿನಿ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ, ಧರ್ಮಜಾಗೃತಿ ಸಂದೇಶ, ಶಿವದೀಕ್ಷೆ ಹಾಗೂ ವೀರಭದ್ರೇಶ್ವರ ಜಯಂತೋತ್ಸವ ಸೇರಿದಂತೆ ಹಲವು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ದೇವರಾಜ್ ಶಾಸ್ತ್ರಿ, ವಿಜಯಕುಮಾರ್ ಶಾಸ್ತ್ರಿ, ಶಿವಯ್ಯ ಶಾಸ್ತ್ರಿ, ಮಲ್ಲೇಶ್ ಶಾಸ್ತ್ರಿ, ಪರಮೇಶ್ ಶಾಸ್ತ್ರಿ, ಪ್ರಕಾಶ್ ಶಾಸ್ತ್ರಿ ಉಪಸ್ಥಿತರಿದ್ದರು.

# ಯುವಕರು ದೇಶದ ಆಸ್ತಿಯಾಗಿ ಬೆಳೆಯಬೇಕು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹೊಳೆನರಸೀಪುರ: ಯುವಕರು ವಿದ್ಯಾಭ್ಯಾಸದ ಅವಧಿಯಲ್ಲಿ ದುಶ್ಚಟಕ್ಕೆ ಒಳಗಾಗಿದೆ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಬೆಳೆಯಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಜಿ.ಜಿ. ರಾಜಶೇಖರ್ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಸಿಸಿ ಘಟಕ ಹಾಗೂ ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ವತಿಯಿಂದ ಬುಧವಾರ ನಶಾ ಮುಕ್ತ ಅಭಿಯಾನದ ಅಂಗವಾಗಿ ನಡೆದ ಕಿರು ನಾಟಕಕ್ಕೆ ಚಾಲನೆ ನೀಡಿ ಮಾತನಾಡಿ, ಕೇಂದ್ರ ಸರ್ಕಾರ ನಶಾ ಮುಕ್ತ ಯುವ ಎಂಬ ಘೋಷಣೆಯೊಂದಿಗೆ ದೇಶದಲ್ಲಿ ಯುವಕರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಜಾರಿಗೆ ತಂದಿದೆ. ಯುವಕರು ಮದ್ಯಪಾನ, ಧೂಮಪಾನ, ಡ್ರಗ್ಸ್ ಸೇರಿ ನಶಾ ಪದಾರ್ಥಗಳನ್ನು ಸೇವಿಸದೆ ತಮ್ಮ ಪೋಷಕರಿಗೆ ಹಾಗೂ ಸಮಾಜಕ್ಕೆ ಒಳ್ಳೆಯ ವ್ಯಕ್ತಿಗಳಾಗಬೇಕು. ಇಂದು ಸಣ್ಣ ಮಕ್ಕಳೇ ಇಂತಹ ದುಶ್ಚಟಗಳಿಗೆ ದಾಸರಾಗುತ್ತಿರುವುದು ಆಘಾತಕಾರಿ ವಿಷಯ. ಅದರಿಂದಾಗಿ ತಮ್ಮ ಆರೋಗ್ಯ ಹಾಳು ಮಾಡಿಕೊಳ್ಳುವದರ ಜೊತೆಗೆ ಅನೇಕರು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದರು.

ಎನ್‌ಸಿಸಿ ಘಟಕದ ಅಧಿಕಾರಿ ಡಾ. ಹೆಚ್.ಎನ್.ಹರೀಶ್ ಮಾತನಾಡಿ, ನಶಾ ಪದಾರ್ಥಗಳು ಚಿಕ್ಕ ಮಕ್ಕಳಿಗೆ ಸುಲಭವಾಗಿ ಸಿಗುತ್ತಿರುವುದು ಆಶ್ಚರ್ಯಕರ ಸಂಗತಿ. ದೇಶವನ್ನು ಮುನ್ನಡೆಸಬೇಕಾದ ಯುವ ಸಮುದಾಯ ಇಂದು ಇಂತಹ ಮಾದಕ ವಸ್ತುಗಳ ವ್ಯಸನಕ್ಕೆ ದಿನೆ ದಿನೇ ಒಳಗಾಗುತ್ತಿರುವುದು ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹಳ್ಳಿ, ಪಟ್ಟಣ ಎಲ್ಲಾ ಭಾಗದಲ್ಲೂ ಯುವಕರು ಹಾದಿ ತಪ್ಪುತ್ತಿದ್ದಾರೆ. ಡ್ರಗ್ ಎಂಬ ವಿಷಕಾರಿ ಪದಾರ್ಥ ಎಲ್ಲೆಂದರಲ್ಲಿ ದೊರೆಯುತ್ತಿದ್ದು, ಯುವಕರು ಕ್ಷಣಿಕ ಸುಖಕ್ಕೆ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಪೋಷಕರು ತಮ್ಮ ಮಕ್ಕಳನ್ನು ಜಾಗೃತಿಯಿಂದ ಬೆಳೆಸಬೇಕಾದ ಅನಿವಾರ್ಯ ಪರಿಸ್ಥಿತಿ ಬಂದಿದ್ದು, ಮಕ್ಕಳಿಗೆ ಸಂಸ್ಕಾರ ನೀಡುವ ಮೂಲಕ ಸಮಾಜದಲ್ಲಿ ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸಬೇಕೆಂದರು.

ಕಾಲೇಜಿನ ಎನ್‌ಸಿಸಿ ಘಟಕದ ವಿದ್ಯಾರ್ಥಿಗಳು ನಶಾ ಮುಕ್ತ ಸಮಾಜ ನಿರ್ಮಾಣದ ಸಂದೇಶ ಸಾರುವ ಕಿರು ನಾಟಕ ಪ್ರದರ್ಶಿಸಿದರು. ಹಾಗೆಯೇ ನಶಾ ಮುಕ್ತ ಅಭಿಯಾನದ ಕರಪತ್ರ ಪ್ರದರ್ಶಿಸಿದರು. ಇದೇ ವೇಳೆ ನಶಾ ಮುಕ್ತ ಮಾಡುವ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಕಾಲೇಜಿನ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

# ಪೌರ ಕಾರ್ಮಿಕರು ಆರೋಗ್ಯಕ್ಕೆ ಆದ್ಯತೆ ನೀಡಿ

## ಹಾಸನದಲ್ಲಿ ಪೌರ ಕಾರ್ಮಿಕರ ದಿನಾಚರಣೆ | ಅದ್ದೂರಿ ಮೆರವಣಿಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದ ಸ್ವಚ್ಛತೆಗೆ ಶ್ರಮಿಸುವ ಪೌರ ಕಾರ್ಮಿಕರು ಆರೋಗ್ಯಕ್ಕೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ರುದ್ರಮುನಿ ಹೇಳಿದರು.

ಮಹಾನಗರ ಪಾಲಿಕೆ, ಜಿಲ್ಲಾಡಳಿತ ವತಿಯಿಂದ ನಗರದ ಮಹಾನಗರ ಪಾಲಿಕೆ ಆವರಣದಲ್ಲಿ ಬುಧವಾರ ನಡೆದ 15ನೇ ವರ್ಷದ ಪೌರ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪೌರ ಕಾರ್ಮಿಕರ ಗೃಹ ಭಾಗ್ಯ ಯೋಜನೆಯಡಿ ಮನೆ ನಿರ್ಮಾಣಕ್ಕೆ ಸರ್ಕಾರದಿಂದ 7.50 ಲಕ್ಷ ರೂ. ನೀಡಲಾಗುತ್ತಿದ್ದು, ಸ್ಥಳೀಯ ಸಂಸ್ಥೆಗಳು ಜಾಗ ಗುರುತಿಸಿಕೊಡಬೇಕು ಎಂದು ಪೌರ ಕಾರ್ಮಿಕರ ವಸತಿಗಾಗಿ ಜಾಗ ಗುರುತಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ತಹಶೀಲ್ದಾರ್‌ಗಳೊಂದಿಗೆ ಸಮಾಲೋಚಿಸಿ ಜಾಗ ಗುರುತಿಸಬೇಕು. ಕಾರ್ಪೋರೇಷನ್‌ಗೆ 10 ಎಕರೆ ಹಾಗೂ ಪುರಸಭೆಗಳಿಗೆ ತಲಾ 5 ಎಕರೆ ಜಾಗ ಒದಗಿಸುವಂತೆ ಈಗಾಗಲೇ ಪತ್ರ ಬರೆಯಲಾಗಿದೆ ಎಂದರು.

ನಿವೇಶನ ಒದಗಿಸಿದರೆ ಮನೆ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು. ಜಿಲ್ಲೆಯ ಬಾಣಾವರ ಸೇರಿ ಒಂಬತ್ತು ಸ್ಥಳೀಯ ಸಂಸ್ಥೆಗಳಲ್ಲಿ 525 ಪೌರ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಎಸ್ ಇಪಿ ಯೋಜನೆಯಡಿ ಪೌರ ಕಾರ್ಮಿಕರ ಆರೋಗ್ಯಕ್ಕೆ ಶೇ.20ರಷ್ಟು ಅನುದಾನ ಮೀಸಲಿಡಲಾಗಿದೆ. ಆರೋಗ್ಯ ವಿಮೆ, ವಿದ್ಯಾರ್ಥಿ ವೇತನ ಸೇರಿ ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಅವರಿಗೆ ತಲುಪಿಸಬೇಕು ಎಂದರು.

ಎರಡು ತಿಂಗಳ ಹಿಂದೆ ಸಫಾಯಿ ಪೌರ ಕಾರ್ಮಿಕರ ಆಯೋಗದ ಅಧ್ಯಕ್ಷರು ಸಭೆ ನಡೆಸಿದ್ದು, ಜಿಲ್ಲಾಧಿಕಾರಿಯೂ ಪೌರ ಕಾರ್ಮಿಕರೊಂದಿಗೆ ನೇರ ಸಂವಾದ ನಡೆಸಿದ್ದಾರೆ. ಪೌರ ಕಾರ್ಮಿಕರಿಗೆ ವಸತಿ ಹಾಗೂ ವಿಶ್ರಾಂತಿ ಗೃಹಗಳ ವ್ಯವಸ್ಥೆ ಕಲ್ಪಿಸಬೇಕು. ಪ್ರತಿ ತಿಂಗಳ 10ನೇ ತಾರೀಖಿನೊಳಗೆ ವೇತನ ಪಾವತಿಸಬೇಕು ಹಾಗೂ ಸಮವಸ್ತ್ರ ವಿತರಿಸಬೇಕು ಎಂದರು.

ಪಾಲಿಕೆ ಆಯುಕ್ತ ಆರ್. ಕೃಷ್ಣಮೂರ್ತಿ ಮಾತನಾಡಿ, ಪೌರ ಕಾರ್ಮಿಕರ ಶ್ರಮದಿಂದಲೇ ನಗರದ ಬೀದಿಗಳು ಸ್ವಚ್ಛವಾಗಿದ್ದು, ಸಾರ್ವಜನಿಕರ ಆರೋಗ್ಯ ಕಾಪಾಡಲು ಸಾಧ್ಯವಾಗುತ್ತಿದೆ. ಅವರ ಸೇವೆ ಅತ್ಯಂತ ಶ್ರೇಷ್ಟವಾದದ್ದು. ಇತರರು ವಿವಿಧ ಕಾರಣಗಳನ್ನು ಹೇಳಿ ಕೆಲಸದಿಂದ ನುಣುಚಿಕೊಳ್ಳಬಹುದು. ಆದರೆ ಪೌರ ಕಾರ್ಮಿಕರು ಯಾವುದೇ ಪರಿಸ್ಥಿತಿಯಲ್ಲೂ ತಮ್ಮ ಕರ್ತವ್ಯ ನಿರ್ವಹಿಸುತ್ತಾರೆ. ಕೋವಿಡ್-19 ಸಂದರ್ಭದಲ್ಲಿ ಸಹ ಜೀವದ ಹಂಗು ತೊರೆದು ಬೀದಿಗಿಳಿದು ಕೆಲಸ ಮಾಡಿದ್ದಾರೆ. ಅವರ ಶ್ರಮದಿಂದಲೇ ಸ್ವಚ್ಛತೆ ಮತ್ತು ಆರೋಗ್ಯ ಸಾಧ್ಯವಾಗಿದೆ ಎಂದರು.

ಪತ್ರಕರ್ತ ಹೆತ್ತೂರು ನಾಗರಾಜ್ ಮಾತನಾಡಿ, ಕಾರ್ಮಿಕರು ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಸಮವಸ್ತ್ರ ಹಾಗು ಸುರಕ್ಷತಾ ಪರಿಕರಗಳನ್ನು ಕಡ್ಡಾಯವಾಗಿ ಬಳಸಬೇಕು. ಪೌರ ಕಾರ್ಮಿಕರಿಗೆ ಹಾಸನಾಂಬ ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಬೇಕು. ಆರೋಗ್ಯ ವಿಮೆ ಮಾಡಿಸಿಕೊಡಬೇಕೆಂದು ಮನವಿ ಮಾಡಿದರು.

# ಭೂಮಾಪಕ ಎಸ್.ಆರ್. ಮನು ಸಸ್ಪೆಂಡ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ಬೆಳಗೋಡು ಹೋಬಳಿಯ ಉದೇವಾರ ಗ್ರಾಮದ ಸರ್ವೆ ನಂ.173ಕ್ಕೆ ಸಂಬಂಧಿಸಿದ ಸರ್ವೆ ಹಾಗೂ ಸ್ಕೆಚ್ ತಯಾರಿಕೆ ಪ್ರಕರಣದಲ್ಲಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನಲೆಯಲ್ಲಿ ಸಕಲೇಶಪುರ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಭೂಮಾಪಕ ಎಸ್.ಆರ್.ಮನು ಅವರನ್ನು ಅಮಾನತುಗೊಳಿಸಲಾಗಿದೆ.

ಜಿಲ್ಲಾಧಿಕಾರಿ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕಿ ಎಂ.ಡಿ.ಹೇಮಲತಾ ಅವರು ಸೆ.22ರಂದು ಅಮಾನತು ಆದೇಶ ಹೊರಡಿಸಿದ್ದಾರೆ.

ಉದೇವಾರದ ಸರ್ವೆ ನಂ.173ರ ಜಮೀನಿಗೆ ಸಂಬಂಧಿಸಿ ಯು.ಕೆ. ಶಂಕರಾಚಾರ್ ಅವರು ಜು.10ರಂದು ದೂರು ಸಲ್ಲಿಸಿದ್ದರು. ತಾವು ಸ್ವಾಧೀನಾನುಭವದಲ್ಲಿರುವ ಜಮೀನಿನ ಸರ್ವೆ ನಡೆಸುವ ಸಂದರ್ಭದಲ್ಲಿ ನೋಟೀಸ್ ಅಥವಾ ಮಾಹಿತಿ ನೀಡದೆ ಬೇಲಿ ದಾಟಿ ಸರ್ವೆ ನಡೆಸಲಾಗಿದೆ. ಅಲ್ಲದೆ, ಸರ್ವೆ ವರದಿಯಲ್ಲಿ ತಮ್ಮ ಸಹಿಯನ್ನು ನಕಲು ಮಾಡಿ ಮಾಲತಿ ನೇತ್ರಾನಂದ ಅವರ ಹೆಸರಿಗೆ ಅನುಕೂಲವಾಗುವಂತೆ ಸ್ಕೆಚ್ ತಯಾರಿಸಲಾಗಿದೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು.

ದೂರುದಾರರ ಪ್ರಕಾರ, ಸರ್ವೆ ನಂ.173ರಲ್ಲಿ ಒಟ್ಟು 3 ಎಕರೆ ಜಮೀನಿದ್ದು, ಈ ಪೈಕಿ 1 ಎಕರೆ 17 ಗುಂಟೆ ಜಮೀನು ಶಂಕರಾಚಾರ್ ಅವರ ಹೆಸರಿಗೆ ಮಂಜೂರಾಗಿದೆ. ಉಳಿದ 1 ಎಕರೆ 23 ಗುಂಟೆ ಜಮೀನು ಸಹ ತಮ್ಮ ಸ್ವಾಧೀನಾನುಭವದಲ್ಲಿದ್ದು, ಕಾಫಿ, ಕಾಳುಮೆಣಸು ಸೇರಿ ವಿವಿಧ ಬೆಳೆಗಳನ್ನು ಬೆಳೆದಿರುವುದಾಗಿ ದೂರಿನಲ್ಲಿ ತಿಳಿಸಿದ್ದರು.

ದೂರಿನ ಹಿನ್ನೆಲೆಯಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರು ವಿಚಾರಣೆ ಪ್ರಕ್ರಿಯೆ ಕೈಗೊಂಡಿದ್ದರು. ಸೆ.19ರಂದು ನಡೆದ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮದಲ್ಲಿಯೂ ಈ ಪ್ರಕರಣ ಪ್ರಸ್ತಾಪವಾಗಿದ್ದು, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಕ್ರಮಕ್ಕೆ ಸೂಚನೆ ನೀಡಿದ್ದರು.

ಭೂಮಾಪಕ ಎಸ್.ಆರ್.ಮನು ಅವರಿಂದ ಕರ್ತವ್ಯಲೋಪವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಅಮಾನತು ಆದೇಶದಲ್ಲಿ ತಿಳಿಸಲಾಗಿದೆ.

# ಸ್ಥಳೀಯರಿಗೆ ಹೊರೆಯಾಗದಿರಲಿ ಹಾಸನಾಂಬ ಜಾತ್ರೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಕ್ತಿದೇವತೆ ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ತಿಂಗಳಷ್ಟೇ ಉಳಿದಿದ್ದು ಜಿಲ್ಲಾಡಳಿತ ಸಕಲ ಸಿದ್ಧತೆ ಮಾಡಿಕೊಳ್ಳುತ್ತಿದೆ. ಆದರೆ ದೇವಾಲಯ ಸುತ್ತಲಿನ ನಿವಾಸಿಗಳಿಗೆ ಈಗಿನಿಂದಲೇ ದಿಗ್ಬಂಧನದ ಭೀತಿ ಕಾಡುತ್ತಿದೆ.

ಅ. 29 ರಿಂದ ನ. 9ರ ವರೆಗೆ ದೇವಿ ದರ್ಶನ ಕರುಣಿಸಲಿದ್ದಾಳೆ. ವರ್ಷದಿಂದ ವರ್ಷಕ್ಕೆ ಹಾಸನಾಂಬ ದರ್ಶನಕ್ಕೆ ಬರುವ ಭಕ್ತರ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ಜಾತ್ರೆ ಆರಂಭದ 15 ದಿನಗಳ ಮೊದಲೇ ವ್ಯಾಪ್ತಿಯಲ್ಲಿ ಬ್ಯಾರಿಕೇಡ್ ಅಳವಡಿಕೆ, ರಸ್ತೆ ಬಂದ್ ಪ್ರಕ್ರಿಯೆ ಶುರುವಾಗುತ್ತವೆ. ರಸ್ತೆಯಲ್ಲಿ ದಿನಸಿ, ಪ್ಲಾಸ್ಟಿಕ್ ಲೋಟ, ಅಡಿಕೆ ತಟ್ಟೆ, ನೀರಿನ ಬಾಟಲಿ ಮಾರಾಟದ ಹೋಲ್‌ಸೇಲ್ ಮಳಿಗೆಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಕನಿಷ್ಟ ಒಂದು ತಿಂಗಳು ವ್ಯವಹಾರಕ್ಕೆ ಹೊಡೆತ ಬೀಳುತ್ತದೆ. ಜೊತೆಗೆ ಸಾರ್ವಜನಿಕ ಸಂಚಾರಕ್ಕೂ ಭಾರೀ ತೊಂದರೆಯಾಗುತ್ತದೆ. ಪ್ರತಿವರ್ಷ ಹಾಸನಾಂಬ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಅಕ್ಷರಶ: ನರಕಯಾತನೆ ಅನುಭವಿಸುವಂತಾಗಿದೆ. ವ್ಯಾಪಾರವನ್ನೇ ನಂಬಿರುವ ನೂರಾರು ಜನರು ಅಂಗಡಿ ಮುಂಗಟ್ಟುಗಳಿಗೆ ಬೀಗ ಹಾಕಿ ನಿರುದ್ಯೋಗಿಗಳಾಗಬೇಕಾಗುತ್ತದೆ. ಈ ಸಮಸ್ಯೆ ಜಿಲ್ಲಾಡಳಿತಕ್ಕೆ ಗೊತ್ತಿದ್ದರೂ ಪರಿಹಾರ ಕೈಗೊಳ್ಳದೇ ಇರುವುದು ಸ್ಥಳೀಯರ ಅಸಮಾಧಾನಕ್ಕೆ ಕಾರಣವಾಗಿದೆ.

2025ರಲ್ಲಿ 26.13 ಲಕ್ಷ ಭಕ್ತರು ದೇವಿ ದರ್ಶನ ಪಡೆದಿದ್ದರು. 25,59,87,327 ರೂ. ಆದಾಯ ಗಳಿಕೆ ಮೂಲಕ ಶಕ್ತಿ ದೇವತೆ ಕ್ಷೇತ್ರಕ್ಕೆ ಮತ್ತಷ್ಟು ಪ್ರಖ್ಯಾತಿ ಪಡೆದಿದೆ. ಪ್ರತಿವರ್ಷ ಜಾತ್ರಾ ಮಹೋತ್ಸವದಲ್ಲಿ ಕಿ.ಮೀ.ಗಟ್ಟಲೇ ಸರದಿ ಸಾಲು ಇದ್ದರೂ ಭಕ್ತರು ಅಂದಾಜು 10 ರಿಂದ 12 ಗಂಟೆ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆಯುತ್ತಾರೆ. ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಕೃಷ್ಣಬೈರೇಗೌಡ ಅವರು ಸ್ಥಳದಲ್ಲೇ ಮೊಕ್ಕಾಂ ಹೂಡಿ ಅಚ್ಚುಕಟ್ಟು ವ್ಯವಸ್ಥೆ ಮೂಲಕ ಗಮನ ಸೆಳೆದಿದ್ದರು. ಅಂದಾಜು 12 ಕಿ.ಮೀ. ಬ್ಯಾರಿಕೇಡ್ ಅಳವಡಿಕೆ, ಭಕ್ತರಿಗೆ ಗಾಳಿ, ಬೆಳಕು ಹಾಗೂ ನೆರಳಿನ ವ್ಯವಸ್ಥೆ ಮಾಡುವ ಮೂಲಕ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಂಡಿದ್ದರು. ಈ ಬಾರಿಯೂ ಅದೇ ನಿರೀಕ್ಷೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಸಾಧ್ಯತೆ ಇದೆ.

ಸ್ಥಳೀಯ ನಿವಾಸಿಗಳಿಗೆ ಭಾರೀ ತೊಂದರೆ:

ನಾಡಿನ ಲಕ್ಷಾಂತರ ಜನರಿಗೆ ಹಾಸನಾಂಬ ಜಾತ್ರೆ ಎಂದರೆ ಸಂಭ್ರಮವಾದರೆ ದೇವಾಲಯ ಸುತ್ತಲಿನ ಜನರಿಗೆ ನೋವಿನ ಸಂಗತಿಯಾಗಿ ಮಾರ್ಪಟ್ಟಿದೆ. ಪ್ರತಿ ಮನೆ ಮುಂದೆ ಬ್ಯಾರಿಕೇಡ್ ಹಾಕುವುದರಿಂದ ಕನಿಷ್ಟ 20 ದಿನಗಳ ವರೆಗೆ ಮನೆಯಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಮಹಾನಗರ ಪಾಲಿಕೆ ಕುಟುಂಬ ಸದಸ್ಯರಿಗೆ ಗುರುತಿನ ಚೀಟಿ ನೀಡುತ್ತಾರೆಯಾದರೂ ಭದ್ರತೆಗೆ ನಿಲ್ಲುವ ಪೊಲೀಸರು ತಗಾದೆ ತೆಗೆಯುವುದು ತಪ್ಪುವುದಿಲ್ಲ. ಹೀಗಾಗಿ ಪೊಲೀಸರು-ಸ್ಥಳೀಯರ ವಾಗ್ವಾದ ಕೊನೆಯಿರದ ಸಂಘರ್ಷ ಎಂಬಂತಾಗಿದೆ.

ಕಳೆದ ವರ್ಷ ಚೌಡೇಶ್ವರಿ ದೇವಾಲಯ ಸಮೀಪದ ಮನೆಯೊಂದರ 80 ವರ್ಷದ ವೃದ್ಧ ಕಾಲು ಜಾರಿ ಮನೆಯಲ್ಲಿ ಬಿದ್ದು ತೀವ್ರ ರಕ್ತ ಸ್ರಾವವದಿಂದ ಬಳಲುತ್ತಿದ್ದರು. ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸ್ಥಳಕ್ಕೆ ಆಟೋ ಬರಲು ಸಾಧ್ಯವಾಗಲಿಲ್ಲ. ಆ ಸಮಯದಲ್ಲಿ ಗಣ್ಯರು ಬಂದಿದ್ದರಿಂದ ಶಿಷ್ಟಾಚಾರ ಪಾಲನೆಗಾಗಿ ವಾಹನಗಳು ಸಂಚರಿಸುವಂತಿರಲಿಲ್ಲ. ಈ ಬಾರಿಯೂ ಅಂತಹ ವಿಷಮ ಪರಿಸ್ಥಿತಿ ನಿರ್ಮಾಣವಾಗಬಾರದು ಎಂದು ವೃದ್ಧ ಈಗಲೇ ಮನೆ ಖಾಲಿ ಮಾಡಿದ್ದಾರೆ.

### ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಲಿ

ಜಿಲ್ಲಾಡಳಿತವು ಹಾಸನಾಂಬ ಜಾತ್ರಾ ಮಹೋತ್ಸವ ಯಶಸ್ಸಿಗೆ ನೀಡುವ ಗಮನವನ್ನು ಸ್ಥಳೀಯರ ಹಿತಾಸಕ್ತಿಗೂ ನೀಡಬೇಕಾಗುತ್ತದೆ. ಈ ಹಿಂದಿನ ಜಿಲ್ಲಾಧಿಕಾರಿ ಸತ್ಯಭಾಮ ಅವರು ದೇವಾಲಯ ಸುತ್ತಲಿನ ಜಾಗ ಸಮೀಕ್ಷೆ ನಡೆಸಿ ಸೂಕ್ತ ಪರಿಹಾರದೊಂದಿಗೆ ಶಾಶ್ವತವಾಗಿ ಸ್ಥಳಾಂತರಿಸುವ ಕುರಿತು ಎರಡು ಸಭೆ ನಡೆಸಿದ್ದರು. ಸ್ಥಳೀಯರ ಬೇಡಿಕೆ ಮತ್ತು ನಿಗದಿಯಾದ ಪರಿಹಾರ ಮೊತ್ತದ ನಡುವೆ ಭಾರೀ ವ್ಯತ್ಯಾಸ ಕಂಡುಬಂದಿದ್ದರಿಂದ ಆ ಯೋಜನೆಯನ್ನು ಕೈಬಿಡಲಾಯಿತು. ಕೋಟ್ಯಾಂತರ ರೂಪಾಯಿ ಹಣ ವಿನಿಯೋಗಿಸಲು ಸಾಧ್ಯವಾಗದಿದ್ದರೆ ಕನಿಷ್ಟ ಜಾತ್ರೆ ಸಮಯದಲ್ಲಾದರೂ ಸ್ಥಳೀಯರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಬೇಕೆಂದು ವ್ಯಾಪಾರಿ ಹೆಚ್.ಎನ್.ಅಶೋಕ್ ಆಗ್ರಹಿಸಿದರು.



### ವಾಹನಗಳ ಕಳ್ಳತನ ಯತೇಚ್ಛ

ಮನೆಗಳ ಮುಂದೆ ಬ್ಯಾರಿಕೇಡ್ ಹಾಕುವುದರಿಂದ ಬೈಕ್, ಕಾರುಗಳನ್ನು ಅನಿವಾರ್ಯವಾಗಿ ಬೇರೆ ಕಡೆ ನಿಲ್ಲಿಸಬೇಕಾಗುತ್ತದೆ. ಅನೇಕರು ತಣ್ಣೀರುಹಳ್ಳ, ಕೆಇಬಿ ಆವರಣದಲ್ಲಿ ನಿಲ್ಲಿಸುತ್ತಾರೆ. 15 ದಿನಗಳ ವರೆಗೆ ವಾಹನಗಳು ನಿಂತಲ್ಲೇ ನಿಲ್ಲುವುದರಿಂದ ಕಳ್ಳರು ದೃಷ್ಟಿ ಬೀರುತ್ತಾರೆ. ಕಳೆದ ವರ್ಷ 3 ಬೈಕ್‌ಗಳು ಕಳುವಾಗಿವೆ. ಈ ಸಂಬಂಧ ಮಹಾನಗರ ಪಾಲಿಕೆ, ಪೊಲೀಸರಿಗೆ ತಿಳಿಸಿದರೂ ಪ್ರಯೋಜನವಾಗಿಲ್ಲ ಎಂದು ಬ್ರಾಹ್ಮಣರ ಬೀದಿ ನಿವಾಸಿ ಸಂಜಯ್ ಅಳಲು ತೋಡಿಕೊಂಡರು.

# ಕರುಳಿನ ತೀವ್ರ ಸೋರಿಕೆ ಯುವಕನಿಗೆ ಯಶಸ್ವಿ ಶಸ್ತ್ರಚಿಕಿತ್ಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಸಣ್ಣ ಕರುಳು ಹಾಗೂ ದೊಡ್ಡ ಕರುಳಿನ ನಡುವೆ ಪೌಷ್ಟಿಕಾಂಶ ಆಹಾರದ ದ್ರವ ಸೋರಿಕೆಯಿಂದ ಬಳಲುತ್ತಿದ್ದ ಯುವಕನಿಗೆ ಶಸ್ತ್ರ ಚಿಕಿತ್ಸೆ ಮೂಲಕ ರೋಗ ಗುಣಪಡಿಸಲಾಗಿದೆ ಎಂದು ಬೆಂಗಳೂರಿನ ಶೇಷಾದ್ರಿ ಪುರಂ ಅಪೋಲೋ ಆಸ್ಪತ್ರೆ ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ, ಜಿಐ ಮತ್ತು ಹೆಚ್‌ಪಿಬಿ ಆಂಕೋಸರ್ಜನ್ ಡಾ. ಪಿ.ಲೋಹಿತ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2025ರ ಏಪ್ರಿಲ್‌ನಲ್ಲಿ ಸಣ್ಣ ಕರುಳಿನ ರಂಧ್ರದ ಸಮಸ್ಯೆಗೆ ಮತ್ತೊಂದು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಯುವಕನಲ್ಲಿ ಆ ನಂತರ ಕರುಳಿನ ಜೋಡಣೆಯ ಸ್ಥಳದಲ್ಲಿ ಸೋರಿಕೆ ಉಂಟಾಗಿತ್ತು. ಅದರಿಂದ ಕರುಳು ಮತ್ತು ಹೊಟ್ಟೆಯ ಚರ್ಮದ ನಡುವೆ ಐದು ಅಸ್ವಾಭಾವಿಕ ಸಂಪರ್ಕಗಳು (ಫಿಸ್ಟುಲಾಗಳು) ಉಂಟಾಗಿ ಆಹಾರ ಮತ್ತು ಜೀರ್ಣಕಾರಿ ದ್ರವಗಳು ಹೊರ ಚೆಲ್ಲುತ್ತಿದ್ದವು. ನಿತ್ಯ 2.5 ಲೀಟರ್ ದ್ರವ ಹೊರಗೆ ಬರುತ್ತಿತ್ತು. ರೋಗಿಯ ತೂಕ ಕೇವಲ 16-18 ಕೆಜಿಯಾಗಿತ್ತು. ತಕ್ಷಣ ಶಸ್ತ್ರಚಿಕಿತ್ಸೆ ನಡೆಸುವುದು ಅಪಾಯಕಾರಿಯಾಗಿದ್ದರಿಂದ ಮೊದಲು ಹೈ-ಪ್ರೋಟೀನ್ ಪೌಷ್ಟಿಕಾಂಶ, ದ್ರವ ನಷ್ಟ ನಿಯಂತ್ರಣದ ಔಷಧಗಳು ಮತ್ತು ಸುಧಾರಿತ ಗಾಯದ ಆರೈಕೆಯ ಮೂಲಕ ಅವರನ್ನು ಶಸ್ತ್ರಚಿಕಿತ್ಸೆಗೆ ಸಿದ್ಧಗೊಳಿಸಲಾಯಿತು ಎಂದರು.

ನಂತರ ನಡೆಸಿದ ಶಸ್ತ್ರಚಿಕಿತ್ಸೆಯಲ್ಲಿ ಕರುಳುಗಳು ತೀವ್ರವಾಗಿ ಅಂಟಿಕೊಂಡಿರುವುದು ಮತ್ತು ಸಣ್ಣ ಕರುಳಿನಲ್ಲಿ ತೀವ್ರ ಉರಿಯೂತ ಕಂಡುಬಂದಿತು. ಹೀಗಾಗಿ ಹಾನಿಗೊಳಗಾದ ಸಣ್ಣ ಕರುಳಿನ ಭಾಗ ಹಾಗೂ ಅದಕ್ಕೆ ಅಂಟಿಕೊಂಡಿದ್ದ ದೊಡ್ಡ ಕರುಳಿನ ಭಾಗವನ್ನು ತೆಗೆದು ಹಾಕಿ ಆರೋಗ್ಯಕರ ಕರುಳಿನ ಭಾಗಗಳನ್ನು ಮರು ಸಂಯೋಜಿಸಲಾಯಿತು. ಗಾಯ ಗುಣಮುಖ ಆಗಲು ನೆಗೆಟಿವ್-ಪ್ರೆಶರ್ ವೂಂಡ್ ಥೆರಪಿ ಅಳವಡಿಸಲಾಯಿತು ಎಂದು ತಿಳಿಸಿದರು.

ಶಸ್ತ್ರಚಿಕಿತ್ಸೆ ಬಳಿಕ ಯುವಕ ವೇಗವಾಗಿ ಚೇತರಿಸಿಕೊಂಡು ಸಾಮಾನ್ಯವಾಗಿ ಆಹಾರ ಸೇವಿಸಲು ಆರಂಭಿಸಿದ್ದು, ಒಂದು ವಾರದೊಳಗೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಮುಂದಿನ ಹಂತವಾಗಿ ಆರು ವಾರಗಳ ಬಳಿಕ ಕೊಲೊನೋಸ್ಕೋಪಿ ನಡೆಸಲು ಯೋಜಿಸಲಾಗಿದೆ. ಇಂತಹ ಸಂಕೀರ್ಣ ಪ್ರಕರಣಗಳ ಯಶಸ್ವಿ ನಿರ್ವಹಣೆಗೆ ಅನುಭವಿ ತಜ್ಞರು, ಸುಧಾರಿತ ಮೂಲಸೌಕರ್ಯ ಮತ್ತು ವಿವಿಧ ವೈದ್ಯಕೀಯ ತಂಡಗಳ ಸಮನ್ವಯ ಅಗತ್ಯ ಎಂದರು.

ಮಾರುಕಟ್ಟೆ ವಿಭಾಗದ ವಿ.ಎಸ್.ಪ್ರದೀಪ್ ಕುಮಾರ್, ಶಸ್ತ್ರಚಿಕಿತ್ಸೆಗೆ ಒಳಗಾದ ಯುವಕ, ಅವರ ಪೋಷಕರು ಇದ್ದರು.

# ಸಚಿವ ಶಿವಲಿಂಗೇಗೌಡ ರಾಜೀನಾಮೆಗೆ ಬಿಜೆಪಿ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಹಿರಂಗ ಸಭೆಯಲ್ಲಿ ಅಧಿಕಾರಿಗಳಿಗೆ ಗೌರವಯುತವಾಗಿ ಕೊಡುವುದು ನಿಮ್ಮ ಧರ್ಮ ಎನ್ನುವ ಮೂಲಕ ಲಂಚಗುಳಿತನ, ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡಿರುವ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರ ವಿರುದ್ಧ ಜಿಲ್ಲಾ ಬಿಜೆಪಿ ಕಾರ್ಯಕರ್ತರು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಅಧಿಕಾರಿಗಳಿಗೆ ಗೌರವಯುತವಾಗಿ ನೀಡಿ ಎಂಬ ಸಚಿವರ ಹೇಳಿಕೆ ಖಂಡಿಸಿ ಧರಣಿ ಸ್ಥಳದಲ್ಲಿ ಪ್ರತಿಭಟನಾಕಾರರು ಭಿಕ್ಷೆ ಬೇಡುವ ಮೂಲಕ ಸಚಿವರ ನಡೆಯನ್ನು ಅಣಕಿಸಿದರು.

ಈ ವೇಳೆ ಕೆಲವರು 10 ರೂ. ನಿಂದ 100 ರೂ. ವರೆಗೂ ಭಿಕ್ಷೆ ನೀಡಿದರು. ಆಲೂರು ಬಿಜೆಪಿ ಮುಖಂಡ ಅಬ್ಬನ ಕೃಷ್ಣ, ಹಳೆಯದಾದ ಖಾಲಿ ಚೆಕ್‌ವೊಂದನ್ನು ಶಿವಲಿಂಗೇಗೌಡ ಅವರ ಹೆಸರಿಗೆ ನೀಡುವ ಮೂಲಕ, ಸಚಿವರೇ ಈ ಚೆಕ್ ಪಡೆದು ನಮಗೆ ಏನಾದರೂ ಕೆಲಸ ಮಾಡಿಕೊಡಿ ಎಂದು ಮನವಿ ಮಾಡಿದರು.

# ಸರ್ಕಾರಿ ಆಸ್ಪತ್ರೆಗಳಲ್ಲಿ ಸೌಕರ್ಯ ಕೊರತೆ: ಬಿಜೆಪಿ ಆರೋಪ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ನಗರದ ಜಯಚಾಮರಾಜೇಂದ್ರ ಆಸ್ಪತ್ರೆ ಸೇರಿ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲ ಸೌಕರ್ಯಗಳಿಲ್ಲದೆ ರೋಗಿಗಳು ಪರದಾಡುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಶಿವರಾಜ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ಬಡ ಹಾಗೂ ಮಧ್ಯಮ ವರ್ಗದ ಜನರು ತಮ್ಮ ಆರೋಗ್ಯ ಸಮಸ್ಯೆ ಪರಿಹಾರಕ್ಕೆ ಸರ್ಕಾರಿ ಆಸ್ಪತ್ರೆಯನ್ನೇ ಅವಲಂಬಿಸಿದ್ದಾರೆ. ಸಚಿವ ಕೆ.ಎಂ.ಶಿವಲಿಂಗೇಗೌಡರ ನಿರ್ಲಕ್ಷ್ಯದಿಂದಾಗಿ ಆಸ್ಪತ್ರೆಯಲ್ಲಿ ಬಡವರಿಗೆ ಔಷಧಿ ಉಪಚಾರಗಳು ದೊರೆಯುತ್ತಿಲ್ಲ ಎಂದು ಆರೋಪಿಸಿದರು.

ಸರ್ಕಾರಿ ಜಯಚಾಮರಾಜೇಂದ್ರ ಆಸ್ಪತ್ರೆಗೆ ನಿತ್ಯ ನೂರಾರು ರೋಗಿಗಳು ಬರುತ್ತಾರೆ. ಅವಶ್ಯವಾಗಿ ಬೇಕಿರುವ ಚುಚ್ಚುಮದ್ದು, ಔಷಧಿ ಲಭ್ಯವಿರದ ಕಾರಣ ಸಾರ್ವಜನಿಕರು ಖಾಸಗಿ ಆಸ್ಪತ್ರೆಗಳತ್ತ ಮುಖ ಮಾಡುವಂತಾಗಿದೆ. ಹೀಗಾಗಿ ಆರ್ಥಿಕ ಸಂಕಷ್ಟವೂ ಜನರನ್ನು ಕಾಡುತ್ತಿದೆ ಎಂದರು.

## ಇತಿಹಾಸದಲ್ಲಿ ಈ ದಿನ

### ಸೆಪ್ಟೆಂಬರ್-24

1789: ಅಮೆರಿಕದ ಕಾಂಗ್ರೆಸ್ ನ್ಯಾಯಾಂಗ ಕಾಯ್ದೆ ಅಂಗೀಕರಿಸಿತು. ಇದರ ಮೂಲಕ ಫೆಡರಲ್ ನ್ಯಾಯಾಂಗ ವ್ಯವಸ್ಥೆ ಹಾಗೂ ಅಟಾರ್ನಿ ಜನರಲ್ ಹುದ್ದೆಗೆ ಕಾನೂನುಬದ್ಧ ವ್ಯವಸ್ಥೆ ರೂಪುಗೊಂಡಿತು.

1852: ಫ್ರಾನ್ಸ್‌ನ ಹೆನ್ರಿ ಗಿಫಾರ್ಡ್ ಅವರು ಆವಿಶಕ್ತಿಯಿಂದ ಚಲಿಸುವ ವಾಯುನೌಕೆಯನ್ನು ಪ್ಯಾರಿಸ್‌ನಿಂದ ಟ್ರಾಪ್‌ಗೆ ಹಾರಿಸಿದರು. ಇದು ಆರಂಭಿಕ ಚಾಲಿತ ವಾಯುನೌಕೆಗಳ ಇತಿಹಾಸದಲ್ಲಿ ಮಹತ್ವದ ಹೆಜ್ಜೆಯಾಗಿತ್ತು.

1869: ಅಮೆರಿಕದಲ್ಲಿ ಚಿನ್ನದ ಮಾರುಕಟ್ಟೆಯನ್ನು ನಿಯಂತ್ರಿಸಲು ನಡೆದ ಪ್ರಯತ್ನ ವಿಫಲವಾದ ಪರಿಣಾಮ ಚಿನ್ನದ ಬೆಲೆ ತೀವ್ರವಾಗಿ ಕುಸಿದು ದೊಡ್ಡ ಆರ್ಥಿಕ ಅಸ್ಥಿರತೆ ಉಂಟಾಯಿತು.

1948: ಜಪಾನ್‌ನಲ್ಲಿ ಸೋಇಚಿರೊ ಹೋಂಡಾ ಅವರ ನೇತೃತ್ವದಲ್ಲಿ ಹೋಂಡಾ ಮೋಟಾರ್ ಕಂಪನಿ ಸ್ಥಾಪನೆಯಾಯಿತು.

1960: ಅಮೆರಿಕದ ಯುಎಸ್‌ಎಸ್ ಎಂಟರ್‌ಪ್ರೈಸ್ ಜಲಾವತರಣಗೊಂಡಿತು. ಇದು ವಿಶ್ವದ ಮೊದಲ ಅಣುಶಕ್ತಿಚಾಲಿತ ವಿಮಾನವಾಹಕ ನೌಕೆಯಾಗಿತ್ತು.

1973: ಪೋರ್ಚುಗಲ್‌ನಿಂದ ಸ್ವಾತಂತ್ರ್ಯವನ್ನು ಗಿನಿ-ಬಿಸ್ಸಾವ್ ಘೋಷಿಸಿತು.

1996: ಸಮಗ್ರ ಅಣು ಪರೀಕ್ಷೆ ನಿಷೇಧ ಒಪ್ಪಂದಕ್ಕೆ ವಿಶ್ವಸಂಸ್ಥೆಯಲ್ಲಿ 71 ರಾಷ್ಟ್ರಗಳ ಪ್ರತಿನಿಧಿಗಳು ಸಹಿ ಹಾಕಿದರು.

ಜನನ

1896: ಎಫ್. ಸ್ಕಾಟ್ ಫಿಟ್ಜ್‌ಜೆರಾಲ್ಡ್, ಅಮೆರಿಕದ ಪ್ರಸಿದ್ಧ ಕಾದಂಬರಿಕಾರ

1936: ಜಿಮ್ ಹೆನ್ಸನ್, ಮಪೆಟ್ಸ್ ಪಾತ್ರಗಳ ಸೃಷ್ಟಿಕರ್ತ

# ಸ್ಕೂಲಿಗೇ ಇಟ್ಟ ಉಲ್ಲನ್ ಬಾಂಬು!!!-1

**– ಧನಂಜಯ ಜೀವಾಳ**

ಗ್ರಾಮಾಯಣ - 2



ದನಕಾಯುವ ಸಂತಮ್ಮಣ್ಣ ತನ್ನೊಡನೆ ಯಾವಾಗಲೂ ಚಾಟರ್ ಬಿಲ್ಲೊಂದನ್ನು ಹಿಡಿದು ಓಡಾಡುತಿದ್ದ. ಪೊದೆಗಳಲ್ಲಿರುವ ಚಿಟ್ಟಕ್ಕಿ, ಪಿಟ್ಟಕ್ಕಿ, ಅಳಿಲು, ಗಿಣಿ, ಚ್ವಾರಕ್ಕಿ ಮುಂತಾದವನ್ನು ಸಾಧ್ಯವಿದ್ದಾಗಲೆಲ್ಲ ಹೊಡೆದುರುಳಿಸುತ್ತಿದ್ದವನ ಕಣ್ಣಿಗೆ ಅದೊಂದು ದಿನ ಬಾಸಯ್ಯನ ತೋಟದಲ್ಲಿದ್ದ ಸೇಂದೀ ಮಡಿಕೆ ಬೀಳಬೇಕೇ? ಇಡೀ ಏರಿಯಾಕ್ಕೇ ಬೃಹತ್ ಗಾತ್ರದಲ್ಲಿದ್ದ ಆ ಬೈನೇಮರದಲ್ಲಿ ಸೇಂದಿ ಮಡಕೆ ಕಟ್ಟಿದ್ದ ಯಲ್ಲಪ್ಪ ಪೂಜಾರಿ ಬೆಳಿಗ್ಗೆ ಹದಿನೈದು ಶೀಷೆ, ಸಂಜೆ ಹದಿನೈದು ಶೀಷೆ ಸೇಂದಿ ಇಳಿಸುತಿದ್ದ ತೋಟದ ಮಾಲೀಕ ಬಾಸಯ್ಯನಿಗೆ ಬೆಳಿಗ್ಗೆ ಸಂಜೆ ಐದೈದು ಶೀಷೆ ಸೇಂದಿ ಕೊಟ್ಟು, ಉಳಿದದ್ದನ್ನು ಮಾರಲು ಕೊಂಡೊಯ್ಯುತಿದ್ದುದು ವಾಡಿಕೆ.

''ಇಲ್ನೋಡ್ರಲ, ಹಾಲೆ ಹಣ್ಣು! ಅದೇ ಕನ್ನೆಳ್ಳಿಯರ ಮನೇ ಕಣದ ಪಕ್ಕ ಈತಲ, ಆ ಉದ್ದನೇ ಮರ, ನಿನ್ನೆ ರಾತ್ರಿ ಗಾಳಿ ಬೀಸ್ತಾ ಇತ್ತಲ, ಸಕತ್ ಬಿದ್ದಿದಾವೆ''. ದೊಡ್ಡದಾದ ಅಡ್ಡೆ ಕೊಟ್ಟಾಳೇನ ಮಡ್ಸಿ, ಎರಡೂ ಬದಿಯ ಅಂಚನ್ನು ಅದೇ ಕೊಟ್ಟಾಳೆಯ ದಾರದಿಂದ ಎರಡ್ಮೂರು ಕಡೆ ಹೊಲಿದಂತೆ ಗಂಟು ಹಾಕಿ, ಅದರೊಳಗೆ ಹತ್ತಿಪ್ಪತ್ತೈದು ತಿಳಿಹಸಿರು ಬಣ್ಣದ ಹಾಲೆಹಣ್ಣನ್ನು ತುಂಬಿಸಿ ತಂದಿದ್ದ ಗೋಪಾಲ. ವಿಪರೀತ ಸಿಹಿಯ ಆ ಹಣ್ಣನ್ನು ಆಸ್ವಾದಿಸುವ ಅನುಭವವೇ ಅಮೋಘ. ಆದರೆ ಬಾಯಿ ಎಲ್ಲಾ ಅಂಟಂಟು. ಕೆಲವು ಸಲ ಅರ್ಜೆಂಟಲ್ಲಿ ಕಚಗಾಬಜಕಾ ತಿಂದು, ಬಾಯಿ ತೆರೆಯಲಾರದಷ್ಟು ಗಚಕ್ಕ್ ಜಾಮ್‌ಪ್ಯಾಕ್!! ಅದರ್ಲಿ ಈ ಮರಕ್ಕೂ ಸಪೋಟ ಮರಕ್ಕೂ ಹತ್ತಿರದ ಸಂಬಂಧ ಇದೆ ಎನಿಸುತ್ತೆ. ಹಣ್ಣಿನ ಒಳ ತಿರುಳು, ಬೀಜದ ಆಕಾರ ಒಂದೇ ರೀತಿ ಇದೆ. ಟಿಂಬರಿನಾಸೆಗೆ ಈ ಮರ ಕಣ್ಮರೆಯಾಗಿ ಹೋಗಿವೆ. ಎಂಟರಿಂದ ಹತ್ತಡಿ ಸುತ್ತಳತೆಯ ಹಾಗೂ ಇನ್ನೂರಡಿಗಿಂತಲೂ ಎತ್ತರದ ಮರಗಳು ಇಡೀ ತಪ್ಪಲಿಗೇ ಛತ್ರಿ ಹಿಡಿದಂತೆ ನಿಲ್ಲುತ್ತಿದ್ದವು.

ಮಧ್ಯಾಹ್ನ ಮೂರು ಗಂಟೆಯ ಸಮಯ ಅತ್ತಿತ್ತ ನೋಡಿದ ಸಂತಮ್ಮಣ್ಣ ತನ್ನೊಡನೆ ದನಕಾಯಲು ಬಂದಿದ್ದ ನಿರ್ವಾಣಿ ಹಾಗೂ ಗೋಪಾಲನಿಗೆ ''ಬನ್ರಲಾ, ಇವತ್ತು ಸೇಂದಿ ಕುಡಿಯಣ'' ಎಂದು ಬಾಸಯ್ಯನ ತೋಟದ ಬೈನೇಮರದ ಬುಡಕ್ಕೆ ಕರೆದೋಯ್ದ. ಮರದ ಎರಡೂ ಪಕ್ಕಕ್ಕೆ ಅಂದರೆ ತನ್ನ ಎಡಬಲಕ್ಕೆ ಇಬ್ಬರನ್ನೂ ನಿಲ್ಸಿ 'ಮಡ್ಕೆಗೆ ಚಾಟರಬಿಲ್ಲಿನಿಂದ ಕಲ್ಲು ಹೊಡೀತೀನಿ, ಯಾರ್ಕಡೆ ತೂತ ಬೀಳುತ್ತೋ, ಅವರಿಗೆ ಮೊದಲು ಕುಡಿಯೋ ಚಾನ್ಸು ಆಯ್ತಾ?' ಎಂದವನೇ ರಪಕ್ಕನೆ ರಬ್ಬರಿನ ಬಿಲ್ಲು ಎಳೆದು ರ್ರುಮ್ಮನೆ ಕಲ್ಲುಬಿಟ್ಟ. ಸುಮಾರು ಐವತ್ತರವತ್ತಡಿ ಎತ್ತರದಲ್ಲಿ ಕಟ್ಟಿದ್ದ ಮಡಕೆಗೆ ಆ ಕಲ್ಲು ಮಠ್ ಎಂದು ತಾಗಿ ಅಗತ್ಯಕ್ಕಿಂತ ದೊಡ್ಡದಾಗೇ ತೂತಾಯಿತು. ಬಿಳೀ ಬಣ್ಣದ ನೀರುಮಜ್ಜಿಗೆಯಂಥಾ ನೀರಾ ಮಡಕೆಯ ತೂತದಿಂದ ಸೀದಾ ಬುಳ್ಳನೆ ನೆಗೆಯಲಾರಂಭಿಸಿದರು. ನಿರ್ವಾಣಿ ನಿಂತಿದ್ದ ದಿಕ್ಕಿಗೇ ಬೈನೇ ಕಳ್ಳು ನೆಗೆದಿದ್ದರಿಂದ ನಿರ್ವಾಣಿ ನಿಂತಲ್ಲಿಂದ ಕದಲಿ ಗುರಿಯಿಟ್ಟು ಬಾಯಿ ಒಡ್ಡಿ ಗುಟುಕರಿಸಲು ತಡವರಿಸಿದ. ಸೇಂದಿ, ಬಾಯಿಗಿಂತ ಮೂಗಿನೊಳಗೇ ಸುರಿದಿದ್ದರಿಂದ ಸೇಂದಿ ನೆತ್ತಿಗೇರಿ ನಿರ್ವಾಣಿ ಪೆಕರುಪೆಕರಾಗಿ ಕೆಮ್ಮತೊಡಗಿದ. ಇನ್ನು ತಡ ಮಾಡಿದರೆ ಮಡಕೆಯ ಸೇಂದಿ ನೆಲ ಸೇರಿ ವೇಸ್ಟ್ ಆಗುತ್ತೆ ಎಂದರಿತು, ನಿರ್ವಾಣಿಯನ್ನು ಬದಿಗೆ ಸರಿಸಿದ, ಸಂತಮ್ಮಣ್ಣ ತಾನೇ ಬಾಯೊಡ್ಡಿದ. ತಮಾಷೆಗೆ ಕುಡಿಯೋಣ ಎಂದು ಕಲ್ಲು ಹೊಡೆದರೆ ಈ ರೀತಿ ಕುಡಿಯಲಸಾಧ್ಯವಾಗುವಂತೆ ಬಡ್ಡಿಕೆಡುಗುವುದೆಂಬ ಕಲ್ಪನೆಯಿಲ್ಲದವ ಮೂರ್ನಾಲ್ಕು ಗುಟುಕು ಕುಡಿಯಲು ಸಹಾ ಸಾಧ್ಯವಾಗದೇ ಹಾಕಿದ್ದ ಷರಟು ಅದರಡಿಯ ಚೆಡ್ಡಿ ಎಲ್ಲಾ ಸೇಂದಿಯಿಂದ ತೊಪ್ಪೆಯಾದವು.

ತನಗೆ ಕುಡಿಯಲಾಗದೇ ಹಾಗೇ ಬಾಯಿ ಒಡ್ಡಿಕೊಂಡೇ ತನ್ನ ಬದಲಿಗೆ ಬಾಯೊಡ್ಡಿ ಕುಡಿಯಲು ಕೈಸನ್ನೆಯಲಿ ಗೋಪಾಲನನ್ನು ಕರೆಯಲಾರಂಬಿಸಿದನು. ಅಕ್ಕಪಕ್ಕ ನೋಡದೇ ಆಕಾಶದ ಅಂತರಾಳದಿಂದ ಬುಳ್ಳನೆ ಚಿಮ್ಮಿ ನೆಗೆಯುತ್ತಿದ್ದ ಕಳ್ಳಿನ ಧಾರೆಗೆ ದೃಷ್ಟಿ ನೆಟ್ಟು, ಬಾಯೊಡ್ಡಿ ನಿಂತಿದ್ದ ಸಂತಮ್ಮಣ್ಣನಿಗೆ ಇತ್ತ ಭುವಿಯ ಮೇಲೆ ಏನಾಗುತ್ತಿದೆ ಎಂದು ನೋಡಲಾಗುತ್ತಿರಲಿಲ್ಲ. ಇದ್ದಕ್ಕಿದ್ದಂತೆ ಅವನ ತಿಕದ ಮೇಲೆ ಲಥ್ ಎಂದು ಬಾರಿಸಿದಂತಾಗಿ ಮುಂದಕ್ಕೆ ಮುಗ್ಗರಿಸಿಬಿದ್ದನು. ಆಗ ಸಂತಮ್ಮಣ್ಣನಿಗೆ ನಿರ್ವಾಣಿಯ ನಿರಂತರ ಸೇಂದಿ ಕೆಮ್ಮು ಮತ್ತು ಗೋಪಾಲನ 'ಓಡು ಓಡು' ಎಂಬ ಕೂಗು ಕೇಳಿಸಿತು. ಮುಗ್ಗರಿಸಿ ಬಿದ್ದವನ ತಲೆಯೆಲ್ಲಾ ಸೇಂದಿ ಸ್ನಾನವಾಗಿತ್ತು. ತಿಕದ ಮೇಲೆ ಬಾರಿಸಿದವರಾರು ಎಂದು ತಿರುಗಿ ನೋಡಿದರೆ, ಯಲ್ಲಪ್ಪ ಪೂಜಾರಿ! ಸೇಂದಿ ಇಳಿಸಿ ಕೊಂಡೊಯ್ಯಲು ತಂದಿದ್ದ ಹಾಲುಸೋರೇಕಾಯಿ ಬುರುಡೆಯನ್ನು ಸೇಂದಿ ಬೀಳುತ್ತಿದ್ದ ಸ್ಥಾನಕ್ಕೆ ಕಳ್ಳು ಸಂಗ್ರಹಿಸಲು ಇಟ್ಟವನೇ ಸಂತಮ್ಮಣ್ಣ ಕುತ್ತಿಗೆಯ ಕಾಲರನ್ನು ತನ್ನ ಮುಷ್ಠಿಯಲಿ ಮುದುರಿ ಹಿಡಿದು ಅವನ ಎರಡೂ ಕೈಗಳನ್ನು ಅಲ್ಲೇ ಬಿದ್ದಿದ್ದ ಬೈನೇ ಚಾರಿಗಳಿಂದ ಕಟ್ಟಲು ಪ್ರಯತ್ನಿಸಿದ. ದೈಹಿಕವಾಗಿ ಬಲವಾಗಿದ್ದ ಸಂತಮ್ಮಣ್ಣ ಯಲ್ಲಪ್ಪನನ್ನೂ ದೂಡಿ ಬೀಳಿಸಿ ಗೋಪಾಲ ಓಡಿಹೋದ ಗಂಡಿಯತ್ತ ಹಾರಿ ನೆಗೆದು ಸಿಕ್ಕರೆ ಕೆಟ್ಟೆ ಎಂದೆಣಿಸಿ ಓಡಿಬಿಟ್ಟ. ಇತ್ತ ಮೂಗಿನಿಂದಲೇ ಸೇಂದಿ ಕುಡಿದು ನೆತ್ತಿಗೇರಿಸಿಕೊಂಡಿದ್ದ ನಿರ್ವಾಣಿ ಕೆಮ್ಮಿ ಕೆಮ್ಮಿ ಸಾಯುವಂತಾಗಿದ್ದ. ಅವನನ್ನೇ ಹಿಡಿದುಕೊಂಡ ಯಲ್ಲಪ್ಪ ಬೆನ್ನಿನ ಮೇಲೆ ನಾಲ್ಕು ತಪರಾಕಿ ಬಿಟ್ಟ. ನಿರ್ವಾಣಿ ಸೇಂದಿ ನೆತ್ತಿಗೇರಿ, ಹೋಗೆಂದು ಬಿಟ್ಟರೂ ಓಡಿಹೋಗದ ಸ್ಥಿತಿಗೆ ತಲುಪಿದ್ದ. ಅವನನ್ನು ಕೈಬಿಟ್ಟ ಯಲ್ಲಪ್ಪ ಮರದ ಮೇಲಿನ ತೂತು ಮಡಿಕೆ ಖಾಲಿಯಾಗುವವರೆಗೂ ಸೋರೆ ಬುರುಡೆಯನ್ನು ಕೈಯಲ್ಲೇ ಹಿಡಿದು ಸೇಂದಿ ಧಾರೆ ಕೊಂಚವೂ ವ್ಯರ್ಥವಾಗದಂತೆ ಸಂಗ್ರಹಿಸಿದ.

ರಸ್ತೆಯಿಂದ ಒಂದೂ ಒಂದೂವರೆ ಫರ್ಲಾಂಗ್ ದೂರದಲ್ಲಿದ್ದ ಬೈನೇಮರದ ಬಳಿಯಿಂದ ನಿರ್ವಾಣಿಯನ್ನು ರಟ್ಟೆ ಹಿಡಿದು ನಡೆಸಿಕೊಂಡುಬಂದ ಯಲ್ಲಪ್ಪ ರಸ್ತೆಬದಿಯ ಮೋರಿಯ ಮೇಲೆ ಕೂರಿಸಿ ಊರಕಡೆಯಿಂದ ಯಾರಾದ್ರೂ ಬರುವರೋ ಎಂದು ಕಾಯತೊಡಗಿದ. ಅಷ್ಟರಲ್ಲಿ ನಿರ್ವಾಣಿ ಮನೆಯ ಬಳಿಯೇ ವಾಸವಿದ್ದ ಜಾನಿ ಎತ್ತಲೋ ಹೋಗಿದ್ದವ ಅದೇ ದಾರಿಯಲ್ಲಿ ಸೈಕಲ್ ಹೊಡೆದುಕೊಂಡು ಬಂದ. ಆದದೆಲ್ಲವನ್ನೂ ಜಾನಿಗೆ ವಿವರಿಸಿದ ಯಲ್ಲಪ್ಪ, ನಿರ್ವಾಣಿಯನ್ನು ಅವನ ಮನೆಗೆ ತಲುಪಿಸಲು ಕೇಳಿಕೊಂಡ. ಆಗಲೂ ನೆಟ್ಟಗೆ ನಿಲ್ಲಲೂ ಆಗದಂತೆ ದಮ್ಮು ಹಿಡಿದವರಂತೆ ಕೆಮ್ಮುತ್ತಲೇ ಇದ್ದ ನಿರ್ವಾಣಿಯನ್ನು ಜಾನಿಯ ಸುಪರ್ದಿಗೆ ಒಪ್ಪಿಸಿದ ಯಲ್ಲಪ್ಪ ಬಾಸಯ್ಯನ ಮನೆಗೆ ಸೇಂದಿ ನೀಡಲು ಹೋದ.

ದಿನವೂ ಸಂಜೆ ಐದರ ನಂತರವೇ ಸೇಂದಿ ಇಳಿಸಲು ಬರುತಿದ್ದ ಯಲ್ಲಪ್ಪ; ಆ ದಿನ ಬಾಸಯ್ಯನ ಮನೆಯಲ್ಲಿ ಮಾರ್ನಮಿ ಹಬ್ಬವಿದ್ದುದರಿಂದ, ಆವತ್ತು ಸಿಗುವ ಎಲ್ಲಾ ಸೇಂದಿ ಕೊಂಚ ಬೇಗನೇ ಬೇಕೆಂದು ಹೇಳಿದ್ದರಿಂದ ನಾಲ್ಕು ಗಂಟೆಗೇ ಮರದ ಬಳಿಗೆ ಹೋದವನು ಈ ಕಳ್ಳು ಕಳ್ಳರನ್ನು ರೆಡ್‌ಹ್ಯಾಂಡಾಗಿ ಹಿಡಿದಿದ್ದ.

ನಡೆದ ಘಟನೆಯ ವಿವರಗಳನ್ನು ಹೇಳಿ, ಸೇಂದಿ ಬುರುಡೆಯನ್ನು ಬಾಸಯ್ಯನಿಗೆ ಒಪ್ಪಿಸಿದ ಯಲ್ಲಪ್ಪ ಪೂಜಾರಿ, ಲೋಕಳ್ಳಿಯ ಕುಂಬಾರ ಶೆಟ್ಟರ ಮನೆಗೆ ಹೋಗಿ ಹೊಸಾ ಮಡಕೆಯೊಂದನ್ನು ತಂದು ಮರಕ್ಕೆ ಕಟ್ಟಬೇಕೆಂದು ಹೇಳಿ ಬಿರಬಿರನೆ ನಡೆದ. ''ಇವತ್ತು ರಾತ್ರಿಗೆ ಹಬ್ಬ, ನೆಂಟರೆಲ್ಲಾ ಈಗಾಗ್ಲೇ ಬರಲು ಶುರೂ ಮಾಡಿದಾರೆ, ನೀನು ಬೇರೆ ಮಡಕೆ ತಂದು ಕಟ್ಟು, ನಾಳೆ ಬೆಳಗ್ಗೆ ದೇವಸ್ಥಾನದ ಬಳಿ ಪಂಚಾಯ್ತಿ ಸೇರಿಸಲು ಕುಳುವಾಡಿ ಬೆಳ್ಳಿಗೆ ಹೇಳು'' ಎಂದ ಬಾಸಯ್ಯ ಹಬ್ಬದ ಸಿದ್ಧತೆಯತ್ತ ಗಮನ ಹರಿಸಿದ.

ಬೆಳಿಗ್ಗೆ ದೇವಸ್ಥಾನದ ಬಳಿ ಪಂಚಾಯ್ತಿ ಸೇರಿದರು. ನಿರ್ವಾಣಿ, ಗೋಪಾಲ ಮತ್ತು ಸಂತಮ್ಮಣ್ಣನನ್ನು ತಂದು ನಿಲ್ಲಿಸಿದರು. ಗಿಡ್ಡಪ್ಪನಿಗೆ ಸಂತಮ್ಮಣ್ಣನನ್ನು ನೋಡಿ ಕರುಳು ಚುರುಕ್ಕೆನ್ನಿಸಿತು. ಸಂತಮ್ಮಣ್ಣನ ಅವ್ವ ಪಾರ್ವತಿ ಪಟೇಲ್ ಗಿಡ್ಡಪ್ಪನ ಮನೆಯ ದನದ ಕೊಟ್ಟಿಗೆ, ಅಂಗಳ ಸಾರಿಸೋದು, ಮನೆ ಸುತ್ತಮುತ್ತಲಿನ ಕೆಲಸ ಮಾಡಲು ಬರ್ತಿದ್ದಳು. ತೋಟದ ಕೆಲಸ ಮಾಡಲು ಬರ್ತಿದ್ದವರ ಪೈಕಿ ಈ ಪಾರ್ವತಿ ನೋಡಲು ಸ್ವಲ್ಪ ಬೆಳ್ಳಗೆ ಉಂಡುಂಡುಗೆ ಇದ್ದಳಾದ್ದರಿಂದ ದನದ ಕೊಟ್ಟಿಗೆ, ಮನೆ ಸುತ್ತಲಿನ ಕೆಲಸ ಮಾಡಿ, ಸಮಯ ಮಿಕ್ಕಿದರೆ ಮಾತ್ರ ತೋಟಗದ್ದೆಗಳಿಗೆ ಹೋಗಿ ಕಾಫಿ, ಊಟ ಕೊಟ್ಟು ಬರುತಿದ್ದಳು. ಹಾಗಾಗಿ ಮನೆಯಂಗಳ ಮತ್ತು ಹಿತ್ತಲಿನಲ್ಲಿಯೇ ಓಡಾಡುತಿದ್ದುದರಿಂದ ಪಟೇಲ ಗಿಡ್ಡೇಗೌಡನಿಗೂ ಪಾರ್ವತಿಗೂ ಅಂತಸ್ತು ಹಾಗೂ ಜಾತಿ ಮೀರಿದ ಸಂಬಂಧ ಆತನ ಹೆಂಡತಿ ಕಾಳಮ್ಮನಿಗೂ ತಿಳಿಯದಂತೆ ಬೆಳೆದಿತ್ತು.

ಈ ಘಾಟಿ ಹೆಂಗಸು ಪಾರ್ವತಿಯ ಕಾಟ ತಾಳಲಾರದೇ ಅವಳ ಗಂಡ ಪುಟ್ಟರಾಜು ನೆಂಟರಮನೆ ತಿರುಗುವುದರಲ್ಲೇ ಕಾಲಹಾಕುತ್ತಾ, ಹೋದ ನೆಂಟರಮನೆಯಲ್ಲಿ ವಾರಗಟ್ಟಲೇ ಇದ್ದು, ಅಲ್ಲೇ ಅವರಿವರ ತೋಟ ತುಣುಕಲು ಕೆಲಸ ಮಾಡಿಕೊಟ್ಟು ಸಂಬಳ ಪಡೆದು ತಿಂಗಳಿಗೋ ಎರಡು ತಿಂಗಳಿಗೋ ನೆಂಟನಂತೆ ತನ್ನದೇ ಮನೆಗೆ ಬಂದು ಹೆಂಡತಿ ಪಾರ್ವತಿಯ ಬಳಿ ಜಗಳಾಡಿ, ಪೆಟ್ಟು ತಿಂದು ಬೆಳಕು ಹರಿಯುವ ಮುಂಚೆಯೇ ಊರು ಬಿಡುತಿದ್ದ. ನೋಡಲು ಗಿಡ್ಡಪ್ಪನ ಪಡಿಯಚ್ಚಿನಂತೆಯೇ ಇದ್ದ ಸಂತಮ್ಮಣ್ಣನನ್ನು ಪಟೇಲರು ಚಿಕ್ಕಮಗಳೂರಿನ ಬೋರ್ಡಿಂಗ್ ಶಾಲೆಗೆ ಸೇರಿಸಿದರೂ ಅಲ್ಲಿಯೂ ಕಿತಾಪತಿ ಮಾಡಿಕೊಂಡು ಸ್ಕೂಲಿಗೇ ಹೋಗುವುದಿಲ್ಲವೆಂದು ರಚ್ಚೆ ಹಿಡಿದು ಊರಿನಲ್ಲಿ ಒಬ್ಬಂಟಿಯಾಗಿದ್ದ ಪಾರ್ವತಿಯ ಜೊತೆಯೇ ಇದ್ದು ಪಟೇಲರ ಮನೆಯೂ ಸೇರಿದಂತೆ ಮೂರ್ನಾಲ್ಕು ಮನೆಯ ದನ ಕಾಯುವ ಕಾಯಕ ಮಾಡಿಕೊಂಡಿದ್ದ.

ಪಂಚಾಯ್ತಿಯ ತೀರ್ಮಾನದಂತೆ ನಿರ್ವಾಣಿಗೆ ಐದು ರೂಪಾಯಿ, ಗೋಪಾಲನಿಗೆ ಐದು ರೂಪಾಯಿ, ಸಂತಮ್ಮಣ್ಣನಿಗೆ ಹತ್ತು ರೂಪಾಯಿ ದಂಡ ವಿಧಿಸಲಾಯ್ತು. ಹತ್ತು ರೂಪಾಯಿಯನ್ನು ದೇವಸ್ಥಾನದ ಡಬ್ಬಿಗಡಿಗೆಗೆ ಇನ್ನುಳಿದ ಹತ್ತು ರೂಪಾಯಿಯನ್ನು ಯಲ್ಲಪ್ಪ ಪೂಜಾರಿಗೆ ಮಡಕೆ ಪರಿಹಾರವೆಂದು ಕೊಡಲಾಯ್ತು. ದಂಡದ ಹಣವನ್ನು ಗಿಡ್ಡಪ್ಪ ತನ್ನ ಕೋಟಿನ ಜೇಬಿನಿಂದಲೇ ತೆಗೆದು ಅಪರಾಧಿಗಳ ಪರವಾಗಿ ತಾನೇ ಕಟ್ಟುತ್ತಿರುವುದಾಗಿ ಘೋಷಿಸಿ, ಸಂಬಳದಲ್ಲಿ ಮುರಿದುಕೊಳ್ಳುವುದಾಗಿ ತಿಳಿಸಿದ.

ಕಾಳಮ್ಮನ ವಾರಗಿತ್ತಿ ಸುನಂದ ಊರೊಟ್ಟಿನ ಸ್ನಾನದ ಮನೆಯ ಬಳಿ ಗಿಡ್ಡಪ್ಪ ಹಾಗೂ ಪಾರ್ವತಿಯ ನಡುವಿನ ಸಂಬಂಧವನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದಳು. ಮದುವೆಯಾಗಿ ಇಪ್ಪತ್ತು ವರ್ಷವಾಗಿದ್ದರೂ ಮಕ್ಕಳಾಗದಿದ್ದುದರಿಂದ, ಅದಕ್ಕೆ ಯಾವುದೋ ದೇವರ ಶಾಪವೇ ಕಾರಣವೆಂದುಕೊಂಡಿದ್ದ ಕಾಳಮ್ಮ ''ನಾ ಯಂತ ಮಾಡ್ಲೇ ಸುನಂದ; ಹಣ್ಣಿರುವ ಮರಕ್ಕೆ ಮಾತ್ರ ಕಲ್ಲು ಹೊಡೀತಾರೆ'' ಎಂದುಕೊಂಡು ಗಂಡನನ್ನು ಪ್ರಶ್ನಿಸಲಾಗದೇ ಸರಿದಾರಿಗೂ ತರಲಾಗದೇ ಅಸಹಾಯಕಳಾಗಿ ಮನೆ-ತೋಟದ ಕೆಲಸದಲ್ಲಿ ತಲ್ಲೀನಳಾಗಿ, ಗಂಡನ ಆ ಪಾಪದ ಪ್ರಾಯಶ್ಚಿತ್ತವೆಂಬಂತೆ ಮನೆಬಾಗಿಲಿಗೆ ಬಂದವರಿಗೆ ಇನ್ನಿಲ್ಲದ ಆರೈಕೆ ಮಾಡುತಿದ್ದಳು. (ಮುಂದುವರೆಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248